3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 6

ಚಾಸಾ 7

| | |
|---|---|
| ಹೆಸರು | ನರಸಿಂಹಮೂರ್ತಿ |
| ತಂದೆಯ ಹೆಸರು | ಗಂಗಪ್ಪ |
| ವಯಸ್ಸು | 55 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಚಿಕ್ಕದಾಳವಟ್ಟ, ಮಧುಗಿರಿ ತಾಃ |

ಸಾಕ್ಷಿಯನ್ನು ದಿನಾಂಕ 19.11.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಮೃತ ಸಂಜೀವರಾಯಪ್ಪ ನನ್ನ ಚಿಕ್ಕಮ್ಮನ ಮಗ. ಅವರು ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ. ಅವರ ಮೃತ ದೇಹವನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ತಂದಿದ್ದರು. ಆಗ ನಾನು, ಚಾಸಾ.8 ಮತ್ತು 9 ರವರು ಹಾಜರಿದ್ದೆವು. ಶವಾಗಾರದಲ್ಲಿ ಹೆಣದ, ನಮ್ಮ, ಪೊಲೀಸರ ಭಾವಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ಹೆಣದ ಕುತ್ತಿಗೆಯಲ್ಲಿ ಕಪ್ಪು ಬಣ್ಣದ ಗುರುತು ಇತ್ತು. ನಂತರ ಪೊಲೀಸರು ಮಹಜರ್ ಮಾಡಿಕೊಂಡು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಶವದ ಪಂಚನಾಮೆಯನ್ನು ನಿಪಿ.6 ಎದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಶವದ ಮೇಲೆ ಪ್ಯಾಂಟು ಮತ್ತು ಷರಟು ಇತ್ತು. ನನ್ನೊಂದಿಗೆ ಇದ್ದ ನಾಗರಾಜುರವರು ಮೃತ ಸಂಜೀವರಾಯಪ್ಪರವರಿಗೆ ಊರಿನಲ್ಲಿ ಯಾರೋ ಹೊಡೆದಿದ್ದು, ಅದರಿಂದ ಅವರು ಮನನೊಂದು ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುತ್ತಾನೆಂದು ತಿಳಿಸಿರುತ್ತಾನೆ.

**<u>ಪಾಟೀಸವಾಲುಃ ಆರೋಪಿಗಳ ಪರ ಶ್ರೀ.B.K.P.S. ವಕೀಲರಿಂದ :</u>**

2) ಪೋಲೀಸ್ ಠಾಣೆಯಲ್ಲಿ ಶವ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ